ಕೊಂಚ ನಾನೂ ಅನುಸರಿಸಿಕೊಂಡೆ. ನಾನು ಯಾತಕ್ಕೂ ಇರಲಿ ಎಂದು ಲಾಯರ್‌ನ ಸಂಪರ್ಕಿಸಿದ್ದೆ. ಆತ ಕೂಡ ಕಾನೂನುಬದ್ಧವಾಗಿ ವೆಸ್ಟ್‌ಹೆಲ್ತ್‌ನವರು ನನಗೇನೂ ಮಾಡಲಾರರು. ಆದರೆ ನನ್ನ ವೈದ್ಯಕೀಯ ಖರ್ಚುಗಳನ್ನು ಕೊಡಬೇಕೆಂಬ ಯಾವ ಕಮಿಟ್‌ಮೆಂಟೂ ಅವರಿಗಿಲ್ಲ. ಆದ್ದರಿಂದ ನನಗೆ ಬೆನಿಫಿಟ್ಸ್ ಬೇಕಾದರೆ ಕೊಂಚಕಾಲವಾದರೂ ನನ್ನ ಹೊರಚರ್ಯೆಯನ್ನು ಮತ್ತೆ ಬದಲಾಯಿಸಿಕೊಳ್ಳಲೇಬೇಕು. ಬದಲಾಯಿಸಿಕೊಂಡೆ' ಎಂದು ಟಾಮ್‌ಕ್ರೂಸ್ ಕೇಶಶೈಲಿಯ ಆತನ ಚಿತ್ರವನ್ನು ಕಳಿಸಿದ್ದ. ನಾನು ಆ ಮಾರಿಸ್‌ನ ನೋಡೇ ಇರಲಿಲ್ಲ.

ಇದಾಗಿ ಒಂದು ವರ್ಷವೇ ಆಗಿತ್ತು. ನಾವೆಲ್ಲ ಈಗ ವೆಸ್ಟ್‌ಹೆಲ್ತ್ ಗ್ರೂಪ್ ಆಫ್ ಹಾಸ್ಪಿಟಲ್‌ಗೆ ಸೇರಿಯಾಗಿತ್ತು. ಒಂದು ವಿಚಿತ್ರ ಸಂದರ್ಭದಲ್ಲಿ ಅಂದು ನಾನು ಮಾರಿಸ್ ಅನ್ನು ಸಂಪರ್ಕಿಸಿದ್ದು. ನಿಕಿಟಾ ಎಂಬ ಪೇಶೆಂಟು ಹೊಟ್ಟೆನೋವು ಎಂದು ಆಸ್ಪತ್ರೆಗೆ ಬಂದಾಗ. ನಾನು ಆಕೆಯನ್ನು ಪ್ರಶ್ನಿಸುತ್ತಿದ್ದಾಗ ಆಕೆ ತನ್ನ ಅಂಡಾಶಯದಲ್ಲಿ ಕೆಲವೊಮ್ಮೆ ಸಣ್ಣ ಸಣ್ಣ ನೀರುತುಂಬಿಕೊಂಡ ಸಿಸ್ಟ್‌ಗಳು ಕಾಣಿಸಿಕೊಂಡು ಅದು ಒಡಕೊಂಡಾಗ ಸಿಕ್ಕಾಪಟ್ಟೆ ಹೊಟ್ಟೆನೋವು ಬರುತ್ತದೆ ಎಂದು ಹೇಳಿದಳು. ನಾನು ಆಕೆಯ ಮೂತ್ರದ ಪರೀಕ್ಷೆಗೆ ಬರೆದು ಆಕೆಯ ಅಂಡಾಶಯಗಳ ಅಲ್ಟ್ರಾಸೌಂಡಿಗೆ ಕೂಡ ಬರೆದು ಹೆಂಗಸರ ಗರ್ಭಾಶಯ, ಅಂಡಾಶಯವನ್ನು ಪರೀಕ್ಷಿಸುವ ಟೇಬಲ್ಲಿನಲ್ಲಿ ಆಕೆಯನ್ನು ಮಲಗಿಸಿ ನಾನೂ ಕೈಗವುಸು ತೊಟ್ಟು ಸಿದ್ಧನಾದೆ. ಆಕೆ ಸ್ಟಿರಪ್ಪುಗಳನ್ನೇರಿ ಕಾಲಗಲಿಸಿದಾಗ ನನ್ನನ್ನೇ ನಾನು ಕಂಡಂತಾಗಿ ಅವಾಕ್ಕಾದೆ. ಕಣ್ಣಿಗೆ ರಾಚುವ ಗಂಡಸುತನ ನನ್ನ ಮುಂದಿತ್ತು. 'ವಾಟ್ ದ ಹೆಕ್' ಎಂದು ನಾಲಿಗೆಯ ತುದಿಯತನಕ ಬಂದರೂ 'ಎಕ್ಸ್‌ಕ್ಯೂಸ್ ಮಿ' ಎಂದು ನನ್ನ ಸಲಕರಣೆಗಳನ್ನೆಲ್ಲ ಅಲ್ಲಿಯೇ ಬಿಟ್ಟು ಕೈಗವುಸು ತೆಗೆದು ರೂಮಿನಿಂದ ಹೊರಗೆ ಬಂದೆ. ನನ್ನ ಮೈ ಬೆವರುತ್ತಿತ್ತು. ನನಗೆ ಸಹಾಯ ಮಾಡಲು ನಿಂತಿದ್ದ ನರ್ಸ್ ಡಯಾನ್ ನಗು ತಡೆಯಲಾಗದೇ ರೂಮಿನಿಂದ ಹೊರಬಂದು, 'ಓ ಮೈ. ದಿಸ್ ಚಿಕ್ ಹ್ಯಾಸ್ ಅ ಡಿಕ್' ಎಂದು ತನ್ನ ಸಹೋದ್ಯೋಗಿಗಳ ಹತ್ತಿರ ಕೂತು ನೆಗಾಡಿ ಯುಟ್ಯೂಬಿನಲ್ಲಿ ಜೆಂಡರ್ ಟ್ರಾನ್ಸ್‌ಫರ್ಮೇಶನ್ ಸರ್ಜರಿಯ ಬಗ್ಗೆ ಹುಡುಕುತ್ತಾ ನನಗೆ ಒಂದಿಷ್ಟು ಅಸಲೀ ನಕಲೀ ಅನಿಮೇಶನ್‌ಗಳನ್ನು ತೋರಿಸುತ್ತಿದ್ದಳು. ಅಷ್ಟು ಹೊತ್ತಿಗೆ ಅಲ್ಟ್ರಾಸೌಂಡ್ ಟೆಕ್ನಿಶಿಯನ್ ಅಲ್ಟ್ರಾಸೌಂಡಿನಲ್ಲಿ ನಿಕಿಟಾಳ ಅಂಡಾಶಯ – ಓವರಿಗಳನ್ನು ಹುಡುಕಾಡಿ ಎಲ್ಲಿಯೂ ಸಿಗದೆ ನನ್ನ ಬಳಿ ಬಂದು, 'ನಿನಗೆ ಹುಚ್ಚು ಹಿಡಿದಿದೆಯಾ? ಹ್ಯಾವ್ ಯು ಸೀನ್ ಹರ್. ಐ ಆಮ್ ನಾಟ್ ಗೋಯಿಂಗ್ ಟು ಫೈಂಡ್ ಓವರಿಸ್. ಶೀ ಈಸ್ ಅ ಗೈ. ಹ್ಯಾವ್ ಯು ಸೀನ್ ಹರ್ ಪೀನಿಸ್' ಎಂದು ಬಯ್ದು ಹೋದಳು.

ಇದು ಟ್ರಾನ್ಸ್ ವ್ಯಕ್ತಿ ಸರಿ. ಈಕೆ ತನಗೆ ಓವರಿಯಲ್ಲಿ ಸಿಸ್ಟ್ ಇದೆ. ಅದು ಒಡಕೊಂಡು ನೋಯುತ್ತಿದೆ ಎಂದು ಹೇಳುತ್ತಿದ್ದಾಳೆ. ಓವರಿಯೇ ಇಲ್ಲ ಎನ್ನುತ್ತದೆ ಅಲ್ಟ್ರಾಸೌಂಡು. ನನಗೆ ವಿಶ್ವದರ್ಶನವಾದ ಮೇಲೆ ಆಕೆಗೆ ಓವರಿಯಿರುವ ಸಂಭವ ಕಮ್ಮಿ ಎಂದನಿಸಿದರೂ, ನಿಕಿಟಾ ಬಿಡುತ್ತಿಲ್ಲ. ಅಲ್ಟ್ರಾಸೌಂಡಿನಲ್ಲಿ ಕಾಣದಿದ್ದರೆ ಎಂಆರ್‌ಐ ಮಾಡಿಸು. ನನ್ನ ಓವರಿಯೇನಾದರೂ ತಿರುಚಿಕೊಂಡು ಸತ್ತರೆ ನಿನ್ನ ಮೇಲೆ ಕೇಸ್ ಹಾಕುತ್ತೇನೆ ಎಂದು ಹೆದರಿಸುತ್ತಿದ್ದಳು. ಅಷ್ಟು ಹೊತ್ತಿಗೆ ಆಕೆಯ ದೇಹದಲ್ಲಿ ಸೇರಿದ್ದ ಹದಿನಾರು ಮಿಲಿಗ್ರಾಂ ಮಾರ್ಫೀನು ಕೂಡ ಕೆಲಸ ಮಾಡಿತು.

ನಾನು ಕೈಗೆ ಸಿಕ್ಕ ಪುಸ್ತಕಗಳನ್ನೆಲ್ಲಾ ಓದಿ, ಅಂತರ್ಜಾಲವನ್ನೆಲ್ಲ ಶೋಧಿಸಿದರೂ ಒಬ್ಬನೇ